ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ        ದಿನಾಂಕ : DATE : 30-5-2020

# ಸಿಎಂ ಸಹಿತ ಸಚಿವ, ಶಾಸಕರ ವೇತನ, ಭತ್ಯೆಯಲ್ಲಿ ಶೇ.30 ಕಡಿತ

ಉ.ವಾ. 30-5-2020

ಬೆಂಗಳೂರು: ಕೊರೊನಾ ಆರ್ಥಿಕ ಸಂಕಷ್ಟ ಹಿನ್ನೆಲೆಯಲ್ಲಿ ಒಂದು ವರ್ಷ ಶಾಸಕರ ವೇತನ ಹಾಗೂ ಭತ್ಯೆಯಲ್ಲಿ ಶೇ. 30 ರಷ್ಟು ಕಡಿತ ಸಂಬಂಧ ಸರ್ಕಾರ ಪರಿಷ್ಕೃತ ಆದೇಶ ಹೊರಡಿಸಿದೆ.

ಶಾಸಕರು ಪ್ರತಿ ತಿಂಗಳು ವೇತನವಾಗಿ 25 ಸಾವಿರ ರೂ. ಪಡೆಯಲಿದ್ದು ವಿವಿಧ ಭತ್ಯೆ ಸಹಿತ 1.50 ಲಕ್ಷ ರೂ. ಪಡೆಯಲಿದ್ದಾರೆ. ಹೀಗಾಗಿ, ಶೇ.30 ರಷ್ಟು ಕಡಿತ 25 ಸಾವಿರ ರೂ.ನಲ್ಲಿ ಕಡಿತ ಮಾಡಬೇಕೋ 1.50 ಲಕ್ಷ ರೂ.ನಲ್ಲಿ ಕಡಿತ ಮಾಡಬೇಕೋ ಎಂಬ ಜಿಜ್ಞಾಸೆ ವಿಧಾನಸಭೆ ಸಚಿವಾಲಯದ ಅಧಿಕಾರಿಗಳಿಗೆ ಇತ್ತು. ಹೀಗಾಗಿ, ಕಾನೂನು ಇಲಾಖೆ ಸಲಹೆ ಕೇಳಲಾಗಿತ್ತು. ಇದೀಗ ಕಾನೂನು ಇಲಾಖೆ ಸಲಹೆ ನಂತರ ವೇತನ ಸಹಿತ ಭತ್ಯೆಯ 1.50 ಲಕ್ಷ ರೂ. ಮೊತ್ತದಲ್ಲಿ ಶೇ.30 ರಷ್ಟು ಕಡಿತ ಮಾಡಲು ಆದೇಶ ಹೊರಡಿಸಲಾಗಿದೆ.

ಹೀಗಾಗಿ, ಮುಖ್ಯಮಂತ್ರಿ, ವಿಧಾನಸಭೆ ಸ್ಪೀಕರ್ ಹಾಗೂ ಪರಿಷತ್ ಸಭಾಪತಿ, ಸಚಿವರು, ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರು ಪಡೆಯುವ ವೇತನ ಹಾಗು ಭತ್ಯೆಯಲ್ಲಿ ಶೇ.30 ರಷ್ಟು ಏ.1 ರಿಂದ ಅನ್ವಯವಾಗುವಂತೆ ಕಡಿತವಾಗಲಿದೆ. ಶಾಸಕರ 25 ಸಾವಿರ ರೂ. ವೇತನದಲ್ಲಿ ಶೇ.30 ಅಂದರೆ 7500 ರೂ. ಕಡಿತವಾಗುತ್ತಿತ್ತು. ಆದರೆ, ವೇತನ ಭತ್ಯೆಯ ಮೊತ್ತ 1.50 ಲಕ್ಷ ರೂ. ನಲ್ಲಿ ಶೇ.30 ಕಡಿತ ಎಂದರೆ ಮಾಸಿಕ 45 ಸಾವಿರ ರೂ. ಕಡಿತವಾಗಲಿದೆ.

**ಏ.1 ರಿಂದ ಒಂದು ವರ್ಷ ಅನ್ವಯ**

## ಆದೇಶದಲ್ಲೇನಿದೆ?

ಕರ್ನಾಟಕ ವಿಧಾನ ಮಂಡಲದ ಸದಸ್ಯರ ವೇತನ , ಪಿಂಚಣಿ ಮತ್ತು ಇತರೆ ಭತ್ಯೆಗಳು ಹಾಗೂ ಇತರೆ ಕಾನೂನು ತಿದ್ದುಪಡಿ ಅಧ್ಯಾದೇಶ-2020 ಪ್ರಕಾರ ಸಂಬಳ, ದೂರವಾಣಿ ವೆಚ್ಚ, ಚುನಾವಣಾ ಕ್ಷೇತ್ರ ಭತ್ಯೆ, ಅಂಚೆ ವೆಚ್ಚ, ಕೊಠಡಿ ಸೇವಕರ ಭತ್ಯೆ, ವಿಮಾನ ಮತ್ತು ರೈಲ್ವೆ ಪ್ರಯಾಣ ಭತ್ಯೆ ಇವುಗಳಲ್ಲಿ ಶೇ.30 ರಷ್ಟು ಕಡಿತಗೊಳಿಸಬಹುದಾಗಿದೆ.